ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಆ ದರವು ಇದಕ್ಕಿಂತಲೂ ಕಡಮೆಯುದೆಯೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಗೊತ್ತಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಮಲ್ಟಪರ್ಪಸ್ ಸೊಸೈಟಿಗಳವರು ಕಬ್ಬಿಣದ ಸಾಮಾನುಗಳನ್ನಾವುದನ್ನಾದರೂ ತಯಾರು ಮಾಡಿ ಮಾರಾಟ ಮಾಡಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಕಬ್ಬಿಣವನ್ನು ಯಾವುದಾದರೂ ಇರಾಖೆಗೆ ಸಾಮಾನುಗಳನ್ನು ಮಾಡಲಕ್ಕೆ ಕೊಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಡಿಪಾರ್ಟ್‌ಮೆಂಟಿನವರು ಗುಳ ತಯಾರು ಮಾಡಿಸಿ ಮಾರಿಸಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಸಂದರ್ಭಗಳಲ್ಲಿ ಮಾರಿಸಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಹಾಗೆ ಮಾರಬೇಕಾದರೆ 9 ಆಣೆ ದರವಿರುವ ಗುಳವನ್ನು ರೂ. 1—2—0 ಗೆ ಮಾರಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

Sri H. SIDDAVEERAPPA.—That question has been disallowed by your goodself, Sir. I do not want to answer it.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಅಗ್ರಿಕಲ್ಚರರ್ ಡಿಪಾರ್ಟ್‌ಮೆಂಟಿನವರು ಮಲ್ಟಪರ್ಪಸ್ ಸೊಸೈಟಿಗೆ ಮಾರುವುದಕ್ಕೆ ಕೊಟ್ಟಾಗ ಸೊಸೈಟಿಯವರು ಮತ್ತೆ ಲಾಭ ಸೇರಿಸಿ ಮಾರಾಟ ಮಾಡಿರುವುದು ಗೊತ್ತಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಲಾಭ ಸೇರಿಸಿಲ್ಲ, ಶೇ॥ 6 ರಷ್ಟು ಕಮಿಷನ್ ಮಾತ್ರ ತೆಗೆದುಕೊಂಡಿದ್ದಾರೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟರು.—ಹಾಗೆ ಲಾಭ ಸೇರಿಸಿ ತೆಗೆದುಕೊಂಡಿದ್ದರೆ ಹಣವನ್ನು ವಾಪಸು ಕೊಡುಸುತ್ತೀರಾ?

Mr. SPEAKER.—If the Hon'ble Member furnishes specific instances, Government will enquire.

ಶ್ರೀ ಜಿ. ದುಗ್ಗಪ್ಪನವರು (ಹೊಳಲ್ಕೆರೆ-ಅನುಸೂಚಿತ ಜಾತಿಗಳು).—ಮಲ್ಟಿ ಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳಿಗೆ ಅಗ್ರಿಕಲ್ಚರರ್ ಡಿಪಾರ್ಟ್‌ಮೆಂಟಿನವರು defecitive ಆಗಿರತಕ್ಕ flats ಮತ್ತು M. S. Rods ಗಳನ್ನು ಸಪ್ಲೈಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಅಗ್ರಿಕಲ್ಚರರ್ ಇಲಾಖೆಯಲ್ಲಿ ಯಾವ ಯಾವ ವ್ಯವಸಾಯದ ಮಾಲುಗಳಿವೆಯೋ ಅವು ಸಪ್ಲೈ ಆಗುತ್ತಿವೆಯೆಂದು ಗೊತ್ತಿದೆ.

ಶ್ರೀ ಜಿ. ದುಗ್ಗಪ್ಪನವರು.—ಅವರು ಕೊಡುತ್ತಿರತಕ್ಕ flats ಮತ್ತು rods ಗಳು ಯಾವ ಉಪಯೋಗಕ್ಕೂ ಬರುವುದಿಲ್ಲವೆಂಬುದು ಗೊತ್ತಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಉಪಯೋಗವಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕಬ್ಬಿಣದ ಮಟ್ಟಿಗೆ ಯಾವುದಾದರೂ ಉಪಯೋಗಕ್ಕೆ ಬಂದೇ ಬರುತ್ತದೆ.

ಶ್ರೀ ಜಿ. ದುಗ್ಗಪ್ಪನವರು.—ಅಂಥಾದ್ದನ್ನು ನಿಮ್ಮ ಗಮನಕ್ಕೆ ತಂದರೆ ಸರಿಪಡಿಸುತ್ತೀರಾ?

Sri H. SIDDAVEERAPPA.—It is a hypothetical question, Sir.

ಶ್ರೀ ಎಸ್. ಎಂ. ಮರಿಯಪ್ಪನವರು (ಪಿರಿಯಾಪಟ್ಟಣ).—ಮಲ್ಟಿಪರ್ಪಸ್ ಸೊಸೈಟಿಗಳು ಕಬ್ಬಿಣದ ಸಾಮಾನುಗಳನ್ನು ಯಾವ ಲಾಭವೂ ಇಲ್ಲದೆ ವಾರಾಟ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು—6% ಅಷ್ಟು ಕಮಿಷನ್ ಕೊಡುತ್ತೇವೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಕಮಿಷನ್ ಕೊಟ್ಟಿರುವುದು ವ್ಯವಸಾಯದ ಇರಾಖೆಯವರಿಗೆ. ಈ ಸೊಸೈಟಿಗಳವರು ಯಾವ ಲಾಭವೂ ಇಲ್ಲದೆ ಮಾರುತ್ತಾರೆ ಅಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಸೊಸೈಟಿಯವರು 6% ಲಾಭವಿಟ್ಟು ಮಾರುವುದಕ್ಕೆ ಅವಕಾಶ ಕೊಟ್ಟಿದೆ.

ಶ್ರೀ ಎಸ್. ಎಂ. ಮರಿಯಪ್ಪನವರು.—ಕಬ್ಬಿಣದ ಸಾಮಾನುಗಳಿಂದ ಗಾಡಿ ವಗ್ಗೆರೆಗಳನ್ನು ಈ ಸೊಸೈಟಿಗಳವರು ಮಾಡಿ ಮಾರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಸೊಸೈಟಿಗಳವರು ಮಾರಿದ್ದಾರೆ.

ಶ್ರೀ ಆರ್. ಅನಂತರಾಮ್‌ಅವರು (ಚಾಮರಾಜಪೇಟೆ).—ಕಬ್ಬಿಣದ ಸಾಮಾನುಗಳನ್ನು ಸೊಸೈಟಿಗಳು ಸಾಲವಾಗಿ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

Sri H. SIDDAVEERAPPA.—That does not arise out of this question.

Allotment for Co-operative Farming.

Q.—468. **Sri D. R. KARI GOWDA** (Hassan):—

Will the Government be pleased to state :—

(*a*) the amount allotted for Co-operative Farming during 1950-51 and 1951-52 ;

(*b*) of this, the amount spent each year ;

(*c*) the places where collective farming on a Co-operative basis is being carried on in the State ;

(*d*) the amount of subsidy and loans granted to each Co-operative Farming Society each year ;

(*e*) whether there are any officers specially to supervise the Co-operative Farming Societies in the Mysore Government ;

(*f*) whether there are any officers who have studied Co-operative Farming in foreign countries and gained experience therein ?

A.—**Sri H. SIDDAVEERAPPA** (Minister for Home Affairs and Agriculture.—

(*a*) and (*b*)

Year	*Amount allotted* Rs.	*Amount spent.* Rs.
1950-51 ...	2,20,000	1,98,155
1951-52 ...	50,000	20,000

(*c*) and (*d*) Statement appended below.

(*e*) None at present, as no separate officer is required for the purpose.

(*f*) None.

	Places where Co-operative Farming is started	Nature of Farming	Amount granted under (a) Subsidy 1950-51 Rs. a. p.	(a) Subsidy 1951-52 Rs.	(b) Loans 1951-52 Rs.	(b) Loans 1950-51 Rs.
1	Arehalli Kaval (Holalkere Taluk).	Collective ...	11,485 6 0	...	...	...
2	Vonakemaradi do ..	Do ...	12,485 6 0	...	...	...
3	Talikatte do ..	Do ...	1,029 5 0	...	...	...
4	Uddur Aspathre Kaval, Hunsur Taluk	Do ...	25,000 0 0	...	...	...
5	Kumbhapura, Ramanagaram Taluk	Do ...	25,000 0 0	...	...	...
6	Halaganahalli, Goribidnur Taluk	Do ...	25,000 0 0	...	...	...
7	Madakehosahalli Chikballapur, Taluk	Better Farming	10,000 0 0	...	...	...
8	Belagumba, Magadi Taluk ...	Joint Farming	10,000 0 0	...	...	...
9	Mullegal Valley, Bangalore North Taluk	Mixed Type ...	10,000 0 0	...	...	...
10	Kadugodi, Hoskote Taluk ...	Collective ...	10,000 0 0	...	...	...
11	Jeeyara, Heggaddevankote ...	Do ...	10,000 0 0	...	...	...
12	Koratigere Kaval, Arkalgud Taluk	Tenant Farming.	10,000 0 0	...	...	...
13	Rudrapura Kaval, Channagiri	Do ...	...	10,000	...	...
14	Attigudde Kaval, Arasikere ...	Do ...	...	10,000	...	...
15	Maranagere, Tiptur ...	Joint Farming	...	...	...	...
16	Karekere, Hassan ...	Do ...	...	...	...	...
	Total ...		1,60,000 1 0	20,000	...	...

ಶ್ರೀ ಡಿ. ಆರ್. ಕರೀಗೌಡರು.—ಸಹಕಾರ ವ್ಯವಸಾಯಕ್ಕೆ ಯಾವ ಯಾವ ಸಹಾಯವನ್ನು ಸರ್ಕಾರದವರು ಒದಗಿಸಿಕೊಡುತ್ತಾರೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವು ಕಡೆ ಹಣ ಕೊಟ್ಟಿದ್ದೇವೆ; ಜಮೀನು ಕೊಟ್ಟಿದ್ದೇವೆ. ವ್ಯವಸಾಯದ ಇಲಾಖೆಯ ಇನ್‌ಸ್ಪೆಕ್ಟರನ್ನು ಸೆಕ್ರೆಟರಿಯಾಗಿ ನೇಮಿಸಿದ್ದೇವೆ. ರೆವಿನ್ಯೂ ಇಲಾಖೆ ಮುಂತಾಗಿ ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳಿಗೂ ಸಹಕಾರ ವ್ಯವಸಾಯಕ್ಕೆ ಸಹಾಯ ಮಾಡಬೇಕೆಂದು ಒಂದು General order ಕೊಟ್ಟಿದ್ದೇವೆ.

ಶ್ರೀ ಡಿ. ಆರ್. ಕರೀಗೌಡರು.—ಟ್ರಾಕ್ಟರ್ ಮೆಷೀನಿನ ಸಹಾಯವನ್ನೇನಾದರೂ ಕೊಟ್ಟು ಹೊಲ ಉಳುವುದಕ್ಕೆ ಸಹಾಯ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಮುಫತ್ತಾಗಿ ಟ್ರಾಕ್ಟರುಗಳನ್ನು ಕೊಡತಕ್ಕ ಪ್ರಶ್ನೆ ನಮಗೆ ತಿಳಿದು ಬಂದಿಲ್ಲ. But we give priority whenever they want help from Government in the matter of bringing lands under cultivation.

ಶ್ರೀ ಡಿ. ಆರ್. ಕರೀಗೌಡರು.—ಇಂಡಿಯಾ ಸರ್ಕಾರದವರು ಟ್ರಾಕ್ಟರುಗಳು, ಪಂಪುಗಳು, ವಿದ್ಯುಚ್ಛಕ್ತಿ ಮುಂತಾದುವುಗಳನ್ನು ಇಂಥ ಸಹಕಾರ ವ್ಯವಸಾಯ ನಡೆಯುವ ಗ್ರಾಮಗಳಿಗೆ ಒದಗಿಸಿಕೊಟ್ಟರೆ ಹೆಚ್ಚಿಗೆ ಅನುಕೂಲವಾಗುತ್ತದೆಂದೇನಾದರೂ ಸಲಹೆ ಕೊಟ್ಟಿದ್ದಾರೆಯೇ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಂಡಿಯಾ ಸರ್ಕಾರದವರು ಸಾಮೂಹಿಕ ವ್ಯವಸಾಯಕ್ಕೆ ಕೈಲಾದ ಮಟ್ಟಿಗೂ ಸಹಾಯ ಕೊಡಬೇಕೆಂದು ತಿಳಿಸಿದ್ದಾರೆ. ಅವರು ಕೆಲವು ಗ್ರಾಂಟುಗಳನ್ನು ಕೊಟ್ಟಿದ್ದಾರೆ.

ಶ್ರೀ ಡಿ. ಆರ್. ಕರೀಗೌಡರು.—ಇಲ್ಲಿ ವ್ಯವಸಾಯದ ಜೊತೆಗೆ ಬೇರೆ ಯಾವುದಾದರೂ ಉಪ ಕಸುಬುಗಳನ್ನು ನಡೆಸುವುದಕ್ಕೆ ಈ 16 ಗ್ರಾಮಗಳ ಪೈಕಿ ಯಾವುದರಲ್ಲಾದರೂ ಪ್ರಯತ್ನ ಪಟ್ಟಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದೂ ಈ ಸ್ಕೀಮಿನಲ್ಲಿದೆ. ಆದರೆ ನಾವು ಮಟ್ಟಿಗೆ ಅದರ ಮೇಲೆ concentrate ಮಾಡುವುದಕ್ಕಾಗಲಿಲ್ಲ. ಜಮೀನು ವ್ಯವಸಾಯಕ್ಕೆ ಹೆಚ್ಚಿಗೆ concentrate ಮಾಡುತ್ತಿದ್ದೇವೆ.

ಶ್ರೀ ಡಿ. ಆರ್. ಕರೀಗೌಡರು.—ನದಾ ಕಾಲವೂ ವ್ಯವಸಾಯದ ಕೆಲಸ ರೈತರಿಗಿರುವುದಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

Mr. SPEAKER.—That does not arise.

ಶ್ರೀ ಡಿ. ಆರ್. ಕರೀಗೌಡರು.—ಯಾವುದಾದರೂ ಉಪಕಸುಬುಗಳಿಗೆ ಏರ್ಪಾಡು ಮಾಡುವುದು ಒಳ್ಳೆಯ ದಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಆಲೋಚನೆ ಮಾಡುತ್ತೇವೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡರು (ಕಾಣಿಗಲು).—ಇಂಡಿಯಾ ಸರ್ಕಾರದವರು ಈ ಸ್ಕೀಮಿಗಾಗಿ ಎಷ್ಟು ಹಣವನ್ನು ಒದಗಿಸಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಸುಮಾರು 2 ಲಕ್ಷ ಚಿಲ್ಲರೆ ಎಂದು ಹೇಳಿದ್ದೇನೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡರು.—ಮೈಸೂರು ಸರ್ಕಾರದವರು ಎಷ್ಟು ಒದಗಿಸಿದ್ದಾರೆ ?

ಶ್ರೀ ಎಚ್. ಸಿದ್ದವೀರಪ್ಪನವರು.—2,೭0,000 ರೂಪಾಯಿಗಳನ್ನು ಇಂಡಿಯಾ ಸರ್ಕಾರದವರು ಗ್ರಾಂಟ್-ಇಣ್-ಏಡ್ ರೂಪದಲ್ಲಿ ಈ ಸಾಮೂಹಿಕ ವ್ಯವಸಾಯ ಕ್ಷೇತ್ರಗಳಿಗೆ ಕೊಟ್ಟಿದ್ದಾರೆ. ನಾವು ನಮ್ಮ 5 ವರ್ಷದ ಯೋಜನೆಯಲ್ಲಿ 50,000 ರೂಪಾಯಿಗಳನ್ನು ಒದಗಿಸಿದ್ದೇವೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡರು.—ಈ ಹಣವನ್ನು ಯಾವ ಯಾವ ಡಿಸ್ಟ್ರಿಕ್ಟಿನಲ್ಲಿ ಯಾವ ಯಾವ ಫಾರಮ್ಮಿಗೆ ಎಷ್ಟೆಷ್ಟು ಹಂಚಿದ್ದೀರಿ ?

Mr. SPEAKER.—That is given in Page 30 of the Report.

Sri H. SIDDAVEERAPPA.—Yes, Sir. I have also got a copy and I shall place it on the Table of the House for the information of the Hon'ble Member.

ಶ್ರೀ ಟಿ. ಎಣ್. ಮೂಡಲಗಿರಿಗೌಡರು.—ತುಮಕೂರು ಡಿಸ್ಟ್ರಿಕ್ಟಿನಲ್ಲಿ ಯಾವುದಾದರೂ ಫಾರಮ್ಮನ್ನು ತೆಗೆದು ಕೊಳ್ಳಬೇಕೆಂದಿದೆಯೇ ?

ಶ್ರೀ ಎಚ್. ಸಿದ್ದವೀರಪ್ಪನವರು.—ಮಾರನಗೆರೆ ಎಂದು ಒಂದಿದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡರು.—ಅದನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅದು ಪರ್ಯಾಲೋಚನೆಯಲ್ಲಿದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡರು.—1951-52 ನೆಯ ಇನವಿಯರ್ಸ್ಲೋ ಇದನ್ನು consider ಮಾಡಿದ್ದರೂ ಇನ್ನೂ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು? ಆ ವರ್ಷವೇ ಏಕೆ ತೆಗೆದುಕೊಳ್ಳಲ್ಲಾ?

Sri H. SIDDAVEERAPPA.—The Hon'ble Member knows the cause, Sir.

ಶ್ರೀ ಎಸ್. ಗೋಪಾಲಗೌಡರು (ಸಾಗರ—ಹೊಸನಗರ).—ಈ ಹಣವನ್ನು ವ್ಯಕ್ತಿಗಳಿಗೆ ಕೊಡಲಾಗುತ್ತಿದೆಯೋ ಅಥವಾ ಸಂಘಗಳಿಗೆ ಕೊಡುತ್ತೀರೋ ?

12-30 P.M.

ಶ್ರೀ ಎಚ್. ಸಿದ್ದವೀರಪ್ಪನವರು.—ಸಹಕಾರ ಸಂಘಗಳಿಗೆ ಕೊಡುವುದು.

ಶ್ರೀ ಎಸ್. ಗೋಪಾಲಗೌಡರು.—ಸಂಘಗಳು ರಿಜಿಸ್ಟರಾಗಿವೆಯೋ ಅಥವಾ ಅವು ಬರಿಯ ಗುಂಪುಗಳೊ ?

ಶ್ರೀ ಎಚ್. ಸಿದ್ದವೀರಪ್ಪನವರು.—ಗುಂಪುಗಳನ್ನು ನಾವು recognise ಮಾಡುವುದೇ ಇಲ್ಲ.

ಶ್ರೀ ಜಿ. ದುಗ್ಗಪ್ಪನವರು (ಹೊಳಲ್ಕೆರೆ—ಅನುಸೂಚಿತ ಜಾತಿಗಳು).—ಇದಕ್ಕೆ 1950-51ರಲ್ಲಿ 2,20,000 ರೂಪಾಯಿಗಳನ್ನು ಸರ್ಕಾರದವರು ಒದಗಿಸಿದ್ದೀರೆಂದು ಹೇಳಿದೆ, ಇದರಲ್ಲಿ ಸಾಲವಾಗಿ ಎಷ್ಟು, ಗ್ರಾಂಟಿನ ರೂಪದಲ್ಲೆಷ್ಟು ?

Sri H. SIDDAVEERAPPA.—That information is not readily available Sir.

ಶ್ರೀ ಟಿ. ಹನುಮಯ್ಯನವರು (ಹಿರಿಯೂರು—ಅನುಸೂಚಿತ ಜಾತಿಗಳು).—ಅರೆಹಳ್ಳಿ ಕಾವಲು, ವನಕೆ ಮರದು ಕಾವಲು ಮುಂತಾಗಿ ಕಾವಲುಗಳಿವೆ. ಈ ಕಾವಲುಗಳಲ್ಲಿತಾನೆ ಸಹಕಾರ ಸಂಘದ ಸದಸ್ಯರು ಜಮೀನು ಮಾಡುವುದು ?

Sri H. SIDDAVEERAPPA.—It is obvious.

ಶ್ರೀ ಟಿ. ಹನುಮಯ್ಯನವರು.—ಅವರು ಜಮೀನುಗಳನ್ನು ಮಾಡುವ ಸ್ಥಳದಲ್ಲಿ ಮನೆಗಳನ್ನು ತೆಗೆದು ಕೊಂಡಿದ್ದಾರೆಯೆ ?

Mr. SPEAKER.—That has been answered last week.

ಶ್ರೀ ಬಿ. ಹುಚ್ಚೇಗೌಡರು (ತೀರ್ಥಕೆರೆ).—ಪರದೇಶಗಳಿಗೆ ಹೋಗಿ ಯಾರೂ ಶಿಕ್ಷಣ ಪಡೆದುಕೊಂಡು ಬಂದಿಲ್ಲವೆಂದು ಉತ್ತರದಲ್ಲಿ ತಿಳಿಸಿದೆ. ಸಹಕಾರ ಇಲಾಖೆಯಿಂದ ಮೂರು ಜನರನ್ನು ಕಳುಹಿಸಿರಲಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಸಾಮೂಹಿಕ ಸಹಕಾರ ವ್ಯವಸಾಯದಲ್ಲಿ ಶಿಕ್ಷಣ ಪಡೆದುಕೊಂಡು ಬಂದಿರುವವರಿದ್ದಾರೆಯೆ ಎಂದು ಕೇಳಿರುವುದಕ್ಕೆ 'ಇಲ್ಲ' ಎಂದು ಉತ್ತರ ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—1950-51ರಲ್ಲಿ ಪ್ರಾರಂಭಿಸಿದ ಸಂಘಗಳಿಗೆ 1,೬ ,೧00 ರೂಪಾಯಿ ಕೊಟ್ಟಿದ್ದೀರಿ, 1951-52ರಲ್ಲಿ ಆರಂಭವಾದುವಕ್ಕೆ 20,000 ರೂಪಾಯಿ ಕೊಟ್ಟಿದ್ದೀರಿ, ಹಳೆಯವಕ್ಕೂ ಹೊಸವಕ್ಕೂ ಇಷ್ಟು ವ್ಯತ್ಯಾಸವೇಕೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾವ ಯಾವುದಕ್ಕೆ ಎಷ್ಟೆಷ್ಟು ಹಣ ಅವಶ್ಯಕವಾಗಿತ್ತೋ ಅಷ್ಟನ್ನು ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಹೀಗೆ ಕೊಡಬೇಕಾದರೆ ಇದು ini ial grant ಎಂದು ಕೊಡುತ್ತೀರೊ ಅಥವಾ ಒಂದೇ ಸಲ ಒಟ್ಟು ಕೆಲಸಕ್ಕೆ ಗ್ರಾಂಟೆಂದು ಕೊಡುತ್ತೀರೊ ?

Sri H. SIDDAVEERAPPA.—The Government have absolutely no discrimination Sir. When giving these grants the needs of a particular society will be taken into consideration.

ಶ್ರೀ ಬಿ. ಹುಚ್ಚೇಗೌಡರು.—1950-51 ರಲ್ಲಿ ಖರ್ಚಾಗಿರುವುದರಲ್ಲಿ, ಉತ್ತರದಲ್ಲಿ 1,98,000 ರೂಪಾಯಿ ಎಂದಿದೆ, ಪರಿಶಿಷ್ಟದಲ್ಲಿ 1,೬0,000 ರೂಪಾಯಿ ಎಂದಿದೆ, ಇದರಲ್ಲಿ ಯಾವುದು ಸರಿ ?

Mr. SPEAKER.—This is the subsidy paid ; 1,೬0,000+20,000 ಎರಡೂ ಸೇರಿ 1,80,000 ರೂಪಾಯಿ ಆಯಿತು.

ಶ್ರೀ ಬಿ. ಹುಚ್ಚೇಗೌಡರು.—ನಾನು ಹೇಳುವುದು 1950-51ರಲ್ಲಿ amount spent on subsidies

(ಶ್ರೀ ಬಿ. ಹುಚ್ಚೇಗೌಡರು).

ಎಂದು 1,98,155 ರೂಪಾಯಿ ತೋರಿಸಿದೆ, ಆದರೆ ಇದೇ ವರ್ಷದಲ್ಲಿ ಈ ಬಗ್ಗೆ ಸಬ್‌ಸಿಡಿ ಕೊಟ್ಟಿರುವುದು 1,80,000. ಬಾಕಿ ಹಣವನ್ನು ಯಾರಿಗೆ ಕೊಟ್ಟಿದ್ದೀರಿ?

Sri H. SIDDAVEERAPPA.—I am not able to follow the Hon'ble Member.

ಶ್ರೀ ಬಿ. ಹುಚ್ಚೇಗೌಡರು.—ಪ್ರಶ್ನೋತ್ತರದ 4ನೆಯ ಪುಟದಲ್ಲಿ ಕೊಟ್ಟಿರುವ ಉತ್ತರಕ್ಕೂ 14ನೆಯ ಪುಟದಲ್ಲಿ ಪರಿಶಿಷ್ಟದಲ್ಲಿ ಕೊಟ್ಟಿರುವುದಕ್ಕೂ ವ್ಯತ್ಯಾಸವಿದೆ. ಕಾರಣವೇನು?

Sri H. SIDDAVEERAPPA. – Probably my friend is referring to Appendix to some other question, Sir.

ಶ್ರೀ ಬಿ. ಹುಚ್ಚೇಗೌಡರು.—ಇದರಿಂದೇನಾದರೂ ಸಾಕಷ್ಟು ಪ್ರತಿಫಲ ಕಂಡು ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ವ್ಯವಸಾಯದಲ್ಲಿ ಪ್ರತಿ ಫಲ ಇಷ್ಟು ಬೇಗ ಗೊತ್ತಾಗುವುದಿಲ್ಲ, ಕೆಲವು ಕಾಲ ಆಗ ಬೇಕು.

ಶ್ರೀ ಬಿ. ಹುಚ್ಚೇಗೌಡರು.—ಮೊನ್ನೆ 200 ಪಲ್ಲ ವಾತ್ರ ದವನ ಬಂತು ಎಂದು ಹೇಳಿದಿರಿ, ಇದಕ್ಕೆ ಈಗಾಗಲೇ ಎರಡು ಲಕ್ಷ ರೂಪಾಯಿ ಕೊಟ್ಟಿದ್ದೀರಿ, ಇದೇ ಪ್ರತಿಫಲವೆ?

Sri H. SIDDAVEERAPPA.—I may assure the Hon'ble Member that Government have been carefully watching the balance sheets and the Government are thoroughly convinced that that is going to be a very useful institution.

ಶ್ರೀ ಕೆ. ಪಂಚಾಕ್ಷರಯ್ಯನವರು (ಅರಸೀಕೆರೆ).—ಈ ಪ್ರಶ್ನೆಗೆ ಕೊಟ್ಟಿರುವ ಇಂಗ್ಲಿಷ್ ಉತ್ತರದಲ್ಲಿ 20 ಸಾವಿರ ರೂಪಾಯಿ ಸಬ್‌ಸಿಡಿ ಎಂದಿದೆ, ಕನ್ನಡದ ಉತ್ತರದಲ್ಲಿ ಇದು ಸಾಲದ ರೂಪದಲ್ಲಿ ಕೊಟ್ಟಿದೆ ಎಂದಿದೆ. ಇದರಲ್ಲಿ ಯಾವುದು ಖಾಯಂ?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾವ ರೂಪದಲ್ಲಾಗಲಿ ಇಷ್ಟು ಹಣಕೊಟ್ಟಿದೆ. ಇಲ್ಲಿ ಮುದ್ರಣದ ತಪ್ಪಿರಬಹುದು.

ಶ್ರೀ ಕೆ. ಪಂಚಾಕ್ಷರಯ್ಯನವರು.—ಯಾವುದು ಸಾಲ; ಯಾವುದು ಸಬ್‌ಸಿಡಿ?

ಶ್ರೀ ಎಚ್. ಸಿದ್ದವೀರಪ್ಪನವರು.—ಇದು ಸಾಲವೋ ಅಥವಾ ಸಬ್‌ಸಿಡಿಯೋ ಎಂಬುದನ್ನು ನೋಡಿ ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸಿನವರು (ಹುಣಸೂರು).—ಈ ಸಾಮೂಹಿಕ ವ್ಯವಸಾಯ ಸಂಘಗಳು, ಕಾಡು ಪ್ರದೇಶ, ಬಂಜರು ಭೂಮಿಗಳಲ್ಲಿ ಪ್ರಾರಂಭವಾಗಿವೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಕೆಲವಕ್ಕೆ ಕಾಡು ಪ್ರದೇಶ, ಕಲವಕ್ಕೆ ಅತ್ಯುತ್ತಮವಾದ ಜಮೀನನ್ನು ಕೊಟ್ಟಿದೆ.

ಶ್ರೀ ಡಿ. ದೇವರಾಜ ಅರಸಿನವರು.—ಸಂಘಗಳಲ್ಲಿ ಸದಸ್ಯರಾಗಿರುವವರು ಹೊಸದಾಗಿ ಬಂದು ವ್ಯವಸಾಯಕ್ಕೆ ಪ್ರಾರಂಭಮಾಡಿದ್ದಾರಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು.

ಶ್ರೀ ಡಿ. ದೇವರಾಜ ಅರಸಿನವರು.—ಸಾಮಾನ್ಯವಾಗಿ ಇಂಥಾ ಕೆಲಸಗಳನ್ನು ಹೊಸದಾಗಿ ಪ್ರಾರಂಭ ಮಾಡಿದ ಮೇಲೆ ಅದರ ಫಲ ಬರಬೇಕಾದರೆ ನಾಲ್ಕಾರು ವರ್ಷಗಳು ಬೇಕಲ್ಲವೆ?

Sri H. SIDDAVEERAPPA.—The Hon'ble Member is perfectly correct Sir.

ಶ್ರೀ ವಿ. ಮುನಿಯಪ್ಪನವರು (ಹಿರಿಯೂರು).—ಈ ಸಾಮೂಹಿಕ ವ್ಯವಸಾಯದ ವಿಷಯದಲ್ಲಿ ಪರದೇಶಗಳಿಗೆ ಹೋಗಿ ವಿಶೇಷಮಾಹಿತಿ ಪಡೆದು ಬರುವುದಕ್ಕೆ ಇಲ್ಲಿಂದ ವಿದ್ಯಾವಂತರನ್ನೋ ವ್ಯವಸಾಯಗಾರರನ್ನೋ ಕಳುಹಿಸಬೇಕೆಂಬ ಯೋಚನೆ ಸರ್ಕಾರಕ್ಕಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಸದ್ಯಕ್ಕೆ ಇಲ್ಲ. I may say there is no special faculty in any University in America for the study of Co-operative Farming only.

ಶ್ರೀ ವಿ. ಮುನಿಯಪ್ಪನವರು.—ಈ ರೀತಿ ಕಳುಹಿಸುವ ಉದ್ದೇಶವಿದೆ, ಈ ವಿಷಯದಲ್ಲಿ ಖಾಸಗಿ ಜನರ ಮತ್ತು ಇಂಥಾ ಸಭೆಯ ಸದಸ್ಯರ ಸಲಹೆಯನ್ನು ಪಡೆದು ಅದನ್ನು ವರದಿಮಾಡಿ ಎಂದು ಸಬ್ ಡಿವಿಜನ್ ಅಧಿಕಾರಿಗಳಿಗೆ ಸರ್ಕ್ಯುಲರ್ ಕಳುಹಿಸಿದ್ದಾರೆಯೆ?

Sri H. SIDDAVEERAPPA.—I want notice.

ಶ್ರೀ ಎಸ್. ಸಿದ್ದಪ್ಪನವರು(ಮಾಗಡಿ).—ಈ ಸಾಮೂಹಿಕ ವ್ಯವಸಾಯದಿಂದ ಸರ್ಕಾರಕ್ಕೆ ಹಣ ಲುಕ್ಸಾನಾಗಿದೆ ಎಂಬುದು ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಹಾಗೆ ಲುಕ್ಸಾನಾಗುವುದಕ್ಕೆ ಅವಕಾಶಕೊಡುವುದಿಲ್ಲ.

ಶ್ರೀ ಎಸ್. ಸಿದ್ದಪ್ಪನವರು.—ಈ ಸಾಮೂಹಿಕ ವ್ಯವಸಾಯಕ್ಕೆ ಸರ್ಕಾರದವರು ಸಾಲಗಳನ್ನು ಕೊಟ್ಟಿರುವ ಬಗ್ಗೆ ಪಾರ್ಟಿಗಳಿಂದ ಸಕ್ಯುರಿಟಿ ತೆಗೆದುಕೊಂಡಿದ್ದಾರೆಯೆ?

ಶ್ರೀ ಎಚ್. ಸಿದ್ದವೀರಪ್ಪನವರು — ಸಹಕಾರ ಸಂಘಗಳಿಗೆ ಕೊಟ್ಟಿದ್ದೇವೆಯೇ ಹೊರತು ವ್ಯಕ್ತಿಗಳಿಗೆ ಕೊಟ್ಟಿಲ್ಲ. Co-operative Societies are the entity. Individuals have no place.

ಶ್ರೀ ಎಸ್. ಸಿದ್ದಪ್ಪನವರು.—ಸಹಕಾರ ಸಂಘಗಳಿಗೆ ಕೊಟ್ಟಿದ್ದರೆ, ಇದಕ್ಕೆ ಏನಾದರೂ ಭದ್ರತೆಪಡೆದು ಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪನವರು.—ಯಾವ ರೀತಿ safeguards ತೆಗೆದುಕೊಳ್ಳಬೇಕೋ ಅದನ್ನೆಲ್ಲಾ ತೆಗೆದು ಕೊಂಡಿದ್ದೇವೆ.

ಶ್ರೀ ಎಸ್. ಎಂ. ಮರಿಯಪ್ಪನವರು (ಪಿರಿಯಾಪಟ್ಟಣ) ಮೊದಲು ಎರಡು ವರ್ಷಗಳಲ್ಲಿ ಲುಕ್ಸಾನಾದರೆ ಆ ಮೇಲೆ ಅದರಿಂದ ಆದಾಯ ಬರುವುದಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಭೂಮಿ ಹದ ಆಗುತ್ತಾ ಆದಾಯ ಬರುತ್ತದೆ.

Rainfall in Certain Hoblis.

Q.—7. **Sri M. SHANKARA LINGE GOWDA** (Nagamangala).—

Will the Government be pleased to state:—

the normal and actual rainfall in all the five hoblis in Nagamangala Taluk,